ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-3 Issue 2, Sep-Oct, 118-125
©*IIMRD*, Mysuru

IIMRD JOURNALS
www.iimrd.com

# ಬ್ಯಾರಿ ಭಾಷೆ : ಒಂದು ಅಧ್ಯಯನ

**ನಿಯಾಝ್ ಪಿ***

*ಸಹಾಯಕ ಪ್ರಾಧ್ಯಾಪಕರು
ಯಾಸಿಮ್. ಬಲ್ಮಠ, ಯೇನೆಪೋಯ ಡೀಮ್ ಟು ಬಿ ವಿಶ್ವವಿದ್ಯಾನಿಲಯ, ಮಂಗಳೂರು.

***ಸಾರಾಂಶ* (Abstract)**

*ವಿವಿಧತೆಯಲ್ಲಿ ಏಕತೆಯನ್ನು ಒಳಗೊಂಡಿರುವ ಭಾರತ ದೇಶವು ಹಲವು ಧರ್ಮಗಳನ್ನು ಒಳಗೊಂಡಿರುವಂತೆ, ಅನೇಕ ಭಾಷೆಗಳ ತವರೂರಾಗಿದೆ. ಭಾಷೆಯೆಂಬುದು ಒಂದು ಮುಖ್ಯವಾದ ಸಂವಹನ ಮಾಧ್ಯಮವೂ ಆಗಿದೆ. ಇಂತಹ ಭಾಷೆಗಳಲ್ಲಿ ಬ್ಯಾರಿ ಭಾಷೆಯೂ ಒಂದಾಗಿದೆ. ಬ್ಯಾರಿ ಭಾಷೆಯು ತನ್ನದೇ ಆದಂತಹ ಭಾಷಾ ಶೈಲಿಯನ್ನು ಒಳಗೊಂಡಿದೆ. ಮೇಲ್ನೋಟಕ್ಕೆ ಬ್ಯಾರಿ ಭಾಷೆಯು ಮಲಯಾಳಂ ಭಾಷೆಯ ಹಾಗೆ ಕಂಡು ಬಂದರೂ ಕೂಡ ಭಿನ್ನವಾಗಿದೆ. ತುಳು ಭಾಷೆಯ ಮಿಶ್ರಣವೂ ಸ್ವಲ್ಪ ಮಟ್ಟಿಗೆ ಬ್ಯಾರಿ ಭಾಷೆಯಲ್ಲಿ ಕಂಡು ಬರುತ್ತದೆ.*

***ಮುಖ್ಯಪದಗಳು* (Keywords):** ದ್ರಾವಿಡ ಭಾಷಾ ಕುಟುಂಬ, ಧ್ವನಿ ವ್ಯವಸ್ಥೆ, ಪ್ರತಿಬಿಂಬ, ಬ್ಯಾರಿ ಭಾಷೆ, ಬ್ಯಾರಿ ನಿಘಂಟು, ಮಾಪಿಳ್ಳ.

## ಪೀಠಿಕೆ

ಭಾಷೆಯು ಮಾನವನಿಗೆ ಮಾತ್ರವೇ ಅನ್ವಯಿಸುವ ಒಂದು ಸಂಕೀರ್ಣ ಸಂವಹನ ಮಾಧ್ಯಮವಾಗಿದೆ. ಈ ಸಂವಹನ ಮಾಧ್ಯಮ ಅಥವಾ ಭಾಷೆಯ ವೈಜ್ಞಾನಿಕ ಅಧ್ಯಯನಕ್ಕೆ ಭಾಷಾ ವಿಜ್ಞಾನ ಅಥವಾ ಭಾಷಾಶಾಸ್ತ್ರ ಎನ್ನುವರು. ಭಾಷೆಯೆನ್ನುವುದು ಒಂದು ರೀತಿಯ ಸ್ವಾಯತ್ತತೆ ಅಥವಾ ಸತ್ಯವನ್ನು ಒಳಗೊಂಡಿರುವುದು. ಭಾಷೆಯನ್ನು ನಾವು ಒಂದು ವಿಷಯವನ್ನಾಗಿ ತೆಗೆದುಕೊಂಡಾಗ ಅದು ಅರ್ಥೈಸಿಕೊಳ್ಳಬಹುದಾದ ಸಾಮರ್ಥ್ಯವನ್ನೊಳಗೊಂಡ ಒಂದು ಸಂಕೀರ್ಣ ವ್ಯವಸ್ಥೆಯನ್ನಬಹುದು. ಇದು ಅರ್ಥಪೂರ್ಣ ವಾಕ್ಯಗಳನ್ನು ನೀಡುವ ಸಾಮರ್ಥ್ಯವನ್ನು ಹೊಂದಿದ್ದು ಆ ಎಲ್ಲಾ ವಾಕ್ಯಗಳು ನಿಯಮಬದ್ಧವಾಗಿರುತ್ತದೆ. ಎಲ್ಲಾ ಭಾಷೆಗಳು ನಿಯಮಬದ್ಧವಾಗಿದ್ದು ಅದರ ಸಂಜ್ಞೆಗಳು ಒಂದು ನಿರ್ದಿಷ್ಟ ಅರ್ಥಗಳನ್ನು ಒಳಗೊಂಡಿರುತ್ತವೆ.

ಭಾಷೆಯ ಬಹುಮುಖ್ಯ ಕೊಡುಗೆಯೇನೆಂದರೆ ಅದು ಮಾನವ ಸಂಸ್ಕೃತಿಯ ಪ್ರತಿಬಿಂಬ. ಆದ್ದರಿಂದ ಭಾಷೆ ನಿರ್ದಿಷ್ಟ ನಿಯಮಗಳನ್ನು ಒಳಗೊಂಡ ಕ್ರಿಯೆಯನ್ನಷ್ಟೆ ಅಲ್ಲದೆ ಭಾಷೆ ಪ್ರಾದೇಶಿಕ ಹಾಗೂ

*Please cite this article as: ನಿಯಾಝ್ ಪಿ (2021). ಬ್ಯಾರಿ ಭಾಷೆ : ಒಂದು ಅಧ್ಯಯನ. ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(2). ಪು.ಸಂ. 118–125*

ಸಂಸ್ಕೃತಿಗಳನ್ನು ಪ್ರತಿಬಿಂಬಿಸುವ ಕಾರ್ಯವನ್ನು ಮಾಡುತ್ತದೆ. ಭಾಷೆಯು ಕಾಲಕಾಲಕ್ಕೆ ಮೌಲ್ಯಮಾಪನಕ್ಕೆ ಒಳಪಡುವ ಹಾಗೂ ಕೌಶಲಗಳನ್ನು ವೃದ್ದಿಸಿಕೊಳ್ಳುವ ಶಕ್ತಿಯುಳ್ಳದ್ದಾಗಿದೆ. ಒಂದೇ ರೀತಿಯ ಹಿನ್ನಲೆಯನ್ನೊಳಗೊಂಡ ಕೆಲವೊಂದು ಭಾಷೆಗಳನ್ನು ಒಂದು ಭಾಷಾಕುಟುಂಬ ಎನ್ನಬಹುದು.

ಬ್ಯಾರಿ ಭಾಷೆಯು ತನ್ನದೇ ಆದಂತಹ ಭಾಷಾ ಶೈಲಿಯನ್ನು ಒಳಗೊಂಡಿದೆ. ಮೇಲ್ನೋಟಕ್ಕೆ ಬ್ಯಾರಿ ಭಾಷೆಯು ಮಲಯಾಳಂ ಭಾಷೆಯ ಹಾಗೆ ಕಂಡು ಬಂದರೂ ಕೂಡ ಭಿನ್ನವಾಗಿದೆ. ತುಳು ಭಾಷೆಯ ಮಿಶ್ರಣವೂ ಸ್ವಲ್ಪ ಮಟ್ಟಿಗೆ ಬ್ಯಾರಿ ಭಾಷೆಯಲ್ಲಿ ಕಂಡು ಬರುತ್ತದೆ. ಬ್ಯಾರಿ ಭಾಷೆಯ ಮೂಲ ಮಲಯಾಳಂ ಭಾಷೆ ಎಂದು ಸುಶೀಲಾ ಪಿ. ಉಪಾಧ್ಯಾಯ ಅವರು 'ಬ್ಯಾರಿ ಭಾಷೆ' ಎಂಬ ತಮ್ಮ ಸಂಶೋಧನಾ ಪ್ರಬಂಧದಲ್ಲಿ ಹೇಳಿದ್ದಾರೆ. ಬ್ಯಾರಿ ಭಾಷೆಯ ಧ್ವನಿ ವ್ಯವಸ್ಥೆ ಹಾಗೂ ವ್ಯಾಕರಣ ವ್ಯವಸ್ಥೆ ತುಳು ಭಾಷೆಗೆ ಹತ್ತಿರವಾದದ್ದು ಎಂದಿದ್ದಾರೆ.

ದಕ್ಷಿಣ ಕನ್ನಡ–ಉಡುಪಿ–ಕಾಸರಗೋಡು ಪ್ರದೇಶದ ಮುಸಲ್ಮಾನರಲ್ಲಿ ಹೆಚ್ಚಿನವರು 'ಬ್ಯಾರಿ' ಎಂಬ ಪಂಗಡಕ್ಕೆ ಸೇರಿದವರು. ಮಲಬಾರು ಪ್ರದೇಶದ ಮುಸಲ್ಮಾನರ ಸಂಪರ್ಕ ಪ್ರಭಾವಗಳಿಂದ ಇವರನ್ನು ಮಾಪಿಳ್ಳ ಅಥವಾ ಮಾಪ್ಲ ಮುಸಲ್ಮಾನರು ಎಂದು ಕರೆಯುವ ವಾಡಿಕೆ ಬಂದಿರಬೇಕು. ಬ್ಯಾರಿ ಎಂಬ ಪದ ತುಳುವಿನ ಬ್ಯಾರ 'ವ್ಯಾಪಾರ–ವಿನಿಮಯ' ಎಂಬ ಶಬ್ದದಿಂದ ಬಂದಿದೆ. ಇದನ್ನು ಅರಬ್ ಶಬ್ದ ಬಹರೀ 'ಸಮುದ್ರಕ್ಕೆ ಸಂಬಂಧಿಸಿದ' ಎಂಬುದರಿಂದ ಬಂದಿದೆ ಎಂದೂ ಊಹಿಸಲಾಗಿದೆ.

ಬ್ಯಾರಿ ಭಾಷೆಯ ಕುರಿತಾಗಿ ವಿಶೇಷ ಅಧ್ಯಯನ ನಡೆದಿಲ್ಲ ಎಂದರೂ ತಪ್ಪಾಗಲಾರದು. 1975 ರಿಂದೀಚೆಗೆ ಬ್ಯಾರಿ ಸಂಸ್ಕೃತಿ ಮತ್ತು ಬ್ಯಾರಿ ಜನಾಂಗದ ಕುರಿತಾಗಿ ಸಂಶೋಧನಾ ಲೇಖನಗಳು ಪ್ರಕಟಗೊಂಡಿವೆ. ಬೆಂಗಳೂರಿನ ಬ್ಯಾರಿ ಅಸೋಸಿಯೇಷನ್‌ನವರು ಬ್ಯಾರಿ ಜನಾಂಗ ಮತ್ತು ಸಂಸ್ಕೃತಿಗೆ ಮನ್ನಣೆ ನೀಡಿದ ನಂತರವೇ ಬ್ಯಾರಿ ಭಾಷೆ, ಸಂಸ್ಕೃತಿಯ ಕಡೆಗೆ ಗಮನ ಬರುವಂತಾಯಿತು. ಕೇಂದ್ರ ಬ್ಯಾರಿ ಸಾಹಿತ್ಯ ಪರಿಷತ್ತು ಸ್ಥಾಪನೆಯಾಗಿ ಅದು ಬ್ಯಾರಿ ಭಾಷೆ ಮತ್ತು ಸಂಸ್ಕೃತಿಯ ಉನ್ನತಿಗಾಗಿ ಪ್ರಯತ್ನಿಸಿತ್ತು. ಜಿಲ್ಲೆಯ ಒಳಗೆ ಹಾಗೂ ಹೊರಗೆ ನಾಲ್ಕು ಬ್ಯಾರಿ ಸಾಹಿತ್ಯ ಸಮ್ಮೇಳನಗಳನ್ನು ನಡೆಸಿ ಕರ್ನಾಟಕ ಸರಕಾರದ ಗಮನವನ್ನು ಸೆಳೆಯುವಲ್ಲಿ ಯಶಸ್ವಿಯಾಯಿತು. ಇದರ ಪರಿಣಾಮವಾಗಿ ಬ್ಯಾರಿ ಜನಾಂಗಕ್ಕೆ ಸರಕಾರದ ಮನ್ನಣೆ ದೊರಕಿತು. ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿಯೂ ಆರಂಭಗೊಂಡಿತು. ಈ ಅಕಾಡೆಮಿಯಿಂದಾಗಿ ಬ್ಯಾರಿ ಸಂಸ್ಕೃತಿ ಸಾಹಿತ್ಯ ತ್ವರಿತವಾಗಿ ಬೆಳೆಯಿತು. ಹಾಗೆಯೇ ಸುಮಾರು ಮೂವತ್ತೈದರಷ್ಟು ಸಾಹಿತ್ಯ ಕೃತಿಗಳನ್ನು ಪ್ರಕಟಿಸಿತು. ಹಾಗೆಯೇ 'ತುಳುನಾಡಿನ ಬ್ಯಾರಿಗಳು', 'ಬ್ಯಾರಿ ಭಾಷೆ' ಮತ್ತು 'ಪೆರಿಮೆ' ಎಂಬ ಮೂರು ಸಂಶೋಧನಾ ಕೃತಿಗಳನ್ನೂ ಪ್ರಕಟಿಸಿತು. ಈ ಕೃತಿಗಳು ಬ್ಯಾರಿ ಭಾಷೆಯ ಅಧ್ಯಯನಕ್ಕೆ ಲಭ್ಯವಿರುವ ಆಕರ ಕೃತಿಗಳಾಗಿವೆ. ಡಾ.ಸುಶೀಲಾ ಉಪಾಧ್ಯಾಯರು ಬ್ಯಾರಿ ಎಂಬುದು ಭಾಷೆಯೆಂಬುದನ್ನು ಸಮರ್ಥಿಸಿದ್ದಾರೆ. 1975 ರಿಂದೀಚೆಗೆ ಬ್ಯಾರಿ ಆಂದೋಲನ ಮತ್ತು ಬ್ಯಾರಿ ಸಮರ್ಥನೆಗೆ ಸರಕಾರಿ ಮನ್ನಣೆ ದೊರಕಿದೆ. ಬ್ಯಾರಿ ಭಾಷೆಯ ಬಗ್ಗೆ ಬಹಳಷ್ಟು ಸಂಶಯಗಳು ಗೊಂದಲಗಳು ಉಳಿದುಕೊಂಡಿದೆ. ಇಂತಹ ತೊಡಕುಗಳನ್ನು ನಿವಾರಿಸಲು ಕಳೆದ ಆರು ವರ್ಷಗಳಿಂದ ಬ್ಯಾರಿ

ಮಾತನಾಡುವ ಕರ್ನಾಟಕ ಮತ್ತು ಕಾಸರಗೋಡು ಜಿಲ್ಲೆಯ ವಿವಿಧ ಭಾಗಗಳ ಬ್ಯಾರಿ ಆಡುಭಾಷೆಯ ಪದಗಳನ್ನು ಸಂಗ್ರಹಿಸಿ ಬ್ಯಾರಿ ಪದಪ್ರಯೋಗಳ ಬಗ್ಗೆಯೂ ಅಧ್ಯಯನಗಳು ನಡೆಯುತ್ತಿವೆ.

ಭಾಷಾ ತಜ್ಞರು ದ್ರಾವಿಡ ಭಾಷೆಯೆಂದು ಗುರುತಿಸಿದ ಮೂಲ ಭಾಷೆ ತಮಿಳು. ತಮಿಳು ಭಾಷೆ ಪ್ರಾಚೀನವಾಗಿದ್ದು, ಕ್ರಿ.ಶ ಆರನೆಯ ಶತಮಾನದಲ್ಲಿ ಸಂಗಂ ಸಾಹಿತ್ಯವಾಗಿ ಪ್ರಸಿದ್ಧಿಯನ್ನು ಪಡೆದಿತ್ತು. ಸಂಸ್ಕೃತದ ಪ್ರಭಾವವಿಲ್ಲದ 'ತಮಿಳಕಂ' ಅಥವಾ 'ಚೆಂತಮಲ್' ಎಂಬ ಸ್ವತಂತ್ರ ಭಾಷೆಯಾಗಿ ಸಂಸ್ಕೃತ ಭಾಷೆಗೆ ಸರಿಸಮನಾದ ಮಹಾಕಾವ್ಯಗಳನ್ನೇ ಸಾಹಿತ್ಯ ಪ್ರಪಂಚಕ್ಕೆ ನೀಡಿತ್ತು. ಮೂಲ ದ್ರಾವಿಡ ಬಾಷೆಯಿಂದ ಕವಲೊಡೆದು ಪ್ರತ್ಯೇಕಿಸಲ್ಪಟ್ಟು ಸ್ವತಂತ್ರವಾಗಿ ಬೆಳೆದು ಬಂದ ಭಾಷೆಗಳನ್ನು ದ್ರಾವಿಡ ಭಾಷೆಯೆಂದು ತಜ್ಞರು ಗುರುತಿಸಿದ್ದಾರೆ.

ದ್ರಾವಿಡ ಭಾಷಾ ಗುಂಪಿನಲ್ಲಿ ಕೇವಲ ಐದು ಭಾಷೆಗಳು ಮಾತ್ರ ಇದ್ದು, ಅವುಗಳನ್ನು ಪಂಚ ದ್ರಾವಿಡ ಭಾಷೆಗಳೆಂದು ಕರೆಯಲಾಗಿದೆ. ಅವುಗಳೆಂದರೆ ತಮಿಳು, ಮಲಯಾಲಂ, ಕನ್ನಡ, ತೆಲುಗು ಮತ್ತು ತುಳು. ಈ ಭಾಷೆಗಳಲ್ಲಿ ತಮಿಳಿನ ಪ್ರಭಾವವಿದ್ದು ಸ್ವತಂತ್ರವಾಗಿ ಬೆಳೆದಿರುವುದೇ ಇದಕ್ಕೆ ಕಾರಣವಾಗಿದೆ. ಆದರೆ ಬ್ಯಾರಿ ಭಾಷೆಯಲ್ಲಿ ಬಹುಮಟ್ಟಿಗೆ ತಮಿಳಿನ ಪ್ರಭಾವವೇ ಇದ್ದು ಮಲಯಾಲಂಕ್ಕಿಂತಲೂ ಪ್ರಾಚೀನವಾದ ತುಳು ಭಾಷೆಗೆ ಸಮಾನವಾಗಿ ಬೆಳೆದು ಬಂದಿರುವುದನ್ನೂ ಸಾಧಾರಣವಾಗಿ ಗುರುತಿಸಬಹುದಾಗಿದೆ. ಬ್ಯಾರಿ ಭಾಷೆ ದ್ರಾವಿಡ ಗುಂಪಿನ ಭಾಷೆ ಎಂಬುದನ್ನು ನಿರೂಪಿಸಬಹುದಾಗಿದೆ. ಸಂಸ್ಕೃತ ಬಾಷೆಯಿಂದ ಪ್ರಭಾವಿತವಾದ ಗ್ರಂಥ ಭಾಷೆಯ ಪ್ರಭಾವವೇ ಇಲ್ಲದ ತಮಿಳಿಗೆ ಇತರ ಭಾಷೆಗಳಿಗಿಂತಲೂ ಸಮೀಪ ಸಂಬಂಧವಿರುವ ಬ್ಯಾರಿ ಬಾಷೆಯನ್ನು ದ್ರಾವಿಡ ಭಾಷಾ ಗುಂಪಿಗೆ ಸೇರಿಸದಿರುವುದು ಗಮನಾರ್ಹ ಸಂಗತಿಯಾಗಿದೆ.

ಬ್ಯಾರಿ ಭಾಷೆಯನ್ನು 'ಮಾಪ್ಲಾ ಭಾಷೆ' ಎಂದು ಗುರುತಿಸಿದ ಡಾ. ಸುಶೀಲ ಉಪಾಧ್ಯಾಯರು ಕೂಡಾ ಬ್ಯಾರಿ ಭಾಷೆ ಸ್ವತಂತ್ರ ಬ್ಯಾರಿ ಭಾಷೆ ಎಂದು ಗುರುತಿಸಿಲ್ಲ. ಶೀರ್ಷಿಕೆಯಲ್ಲೇ ಮಲೆಯಾಳದ ಉಪ ಭಾಷೆ ಅಥವಾ ಪ್ರಭೇದ ಎಂಬ ನಿಲುವನ್ನು ತೋರಿಸಿದ್ದಾರೆ. ಬ್ಯಾರಿ ಭಾಷೆಯಲ್ಲಿ ಬಳಸಲಾದ ಬಹಳಷ್ಟು ಪದಗಳು ಮಲೆಯಾಲ ಮೂಲದಿಂದ ಬಂದಿದೆ ಎಂಬ ತಪ್ಪು ಕಲ್ಪನೆಗಳೇ ಇದಕ್ಕೆ ಕಾರಣ. ಈ ಶಬ್ದಗಳು ತಮಿಳು ಮೂಲದಿಂದ ನೇರವಾಗಿ ಬ್ಯಾರಿ ಭಾಷೆಗೆ ಬಂದವುಗಳೆಂಬುದನ್ನು ಬ್ಯಾರಿ ಭಾಷೆಯ ಪ್ರಾಚೀನತೆಯೇ ಎತ್ತಿ ತೋರಿಸುತ್ತದೆ.

ಬ್ಯಾರಿ ಭಾಷೆ ಮಲೆಯಾಲ ಭಾಷೆ ಪ್ರಚಲಿತವಾಗಿರುವುದಕ್ಕಿಂತಲೂ ಪ್ರಾಚೀನವಾಗಿತ್ತು ಎನ್ನಲು ಪುರಾವೆಗಳಿವೆಯೇ? ಎಂಬುದೇ ಸಹಜವಾದ ಪ್ರಶ್ನೆ. ಕಳೆದ ಐದಾರು ವರ್ಷಗಳಿಂದ 'ಬ್ಯಾರಿ ನಿಘಂಟು' ತಯಾರಿಗಾಗಿ ಸಂಗ್ರಹಿಸಿದ ಪದಗಳು ಭಾಷಾ ಪ್ರಯೋಗದ ವಿಚಾರಗಳು ಮತ್ತು ಮಲೆಯಾಲ ಭಾಷಾ ಬಗೆಗಿನ ಅಧ್ಯಯನಗಳು ಹಾಗೂ ಲಿಪಿ ಬಳಕೆ ಭಿನ್ನವಾಗಿದೆ ಎಂದು ಬ್ಯಾರಿ ಭಾಷೆ ಮಲಯಾಲ ಭಾಷೆಗಿಂತಲೂ ಪ್ರಾಚೀನವಾಗಿತ್ತು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಈ ಪುರಾವೆಗಳು ಬ್ಯಾರಿ ಭಾಷೆ ಸ್ವತಂತ್ರ ದ್ರಾವಿಡ ಭಾಷೆ ಎಂದು ರೂಪಿಸಲು ಸಾಕಾಗುತ್ತವೆ.

ಮೂಲದ್ರಾವಿಡ ಭಾಷೆ ತಮಿಳಿನಿಂದ ಕವಲೊಡೆದು ಬಂದ ಭಾಷೆಯೇ ಮಲಯಾಲ. ಮಲಯಾಲದಲ್ಲಿರುವ ಪದಗಳಲ್ಲಿ 80% ರಷ್ಟು ಪದಗಳು ಸಂಸ್ಕೃತ ಪ್ರಭಾವಿತ ಗ್ರಂಥ ಭಾಷೆಯಿಂದ ಬಂದಿದೆ. ತಮಿಳಿನಲ್ಲಿ ಸಂಸ್ಕೃತ ಭಾಷೆಯ ಪ್ರಭಾವವೇ ಇರಲಿಲ್ಲ. 'ಸಿಲಪ್ಪಾದಿಕಾರಂ' ಎಂಬುದು ಸಂಗಂ ಸಾಹಿತ್ಯ ಯುಗದ ಪ್ರಸಿದ್ಧ ಕೃತಿಯಾಗಿದ್ದು ಇದರ ಕರ್ತೃ ಇಲಂಗೋ ಅಡಿಗಲ್ ಎಂಬುವವರು ಕೇರಳ ರಾಜ್ಯದ ವ್ಯಾಪ್ತಿಯ ಕೊಚ್ಚಿ ಪ್ರದೇಶದವನು. ಇದು ತಮಿಳು ಭಾಷೆಯ ಮೇರು ಕೃತಿ ಎನಿಸಿದೆ. ಆ ಕಾಲದಲ್ಲಿ ಮಲಯಾಲವೆಂಬ ಭಾಷೆಯೇ ಇರಲಿಲ್ಲ. ತಮಿಳಿನಿಂದ ಭಿನ್ನವಾದ ತಮಿಳಿಗೆ ಸಮೀಪವಾದ ಕೃತಿ 'ಮನಿಪ್ರವಾಲಂ' ಎಂಬ ಗ್ರಂಥವನ್ನು ಪ್ರಾಚೀನ ಮಲಯಾಲ ಗ್ರಂಥ ಎಂದು ಗುರುತಿಸಲಾಗಿದೆ. ಇದರ ಕಾಲ ಹತ್ತನೆಯ ಶತಮಾನವಿರಬಹುದೆಂದು ಅಂದಾಜಿಸಲಾಗಿದೆ.

ಇಂದಿನ ಕೇರಳ ರಾಜ್ಯದ ಬಹುಭಾಗ ಪ್ರಾಚೀನ ಚೇರ ರಾಜ್ಯವಾಗಿತ್ತು. ಇದು ತಿರುವನಂಪುರ ಕೊಚ್ಚಿ ಪ್ರದೇಶದ ತಮಿಳುನಾಡಿನ ಗಡಿ ಪ್ರದೇಶವಾಗಿದೆ. ಈ ಪ್ರದೇಶದ ಭಾಷೆ ತಮಿಳಿನ ಒಂದು ಪ್ರಭೇದವಾಗಿದ್ದು; ಮಲರನಾಡು ಪ್ರದೇಶದ ಬುಡಕಟ್ಟು ಜನರು ತಮ್ಮ ಆಡು ಮಾತಾಗಿ ಬೆಳೆಸಿದ ಭಾಷೆಗೆ 'ಮಲೆಯಾಮ್ಮೆ' ಎಂದು ಕರೆಯಲಾಗುತ್ತಿತ್ತು. ವೆಲ್ಲಾರರು, ವಲ್ಲುವರು ಮುಂತಾದ ಮಲೆನಾಡು ವಾಸಿಗಳ ಆಡು ಭಾಷೆ ಇದಾಗಿತ್ತು. ಈ ಭಾಷೆಯಲ್ಲಿ "ರವಿಕೀರ್ತಿ ಪಿಳ್ಳೆಪೋರ್", "ಅನಂತಪುರ ವರ್ಣನ" ಮತ್ತು "ವಡಕ್ಕನ್ ಪಾಟುಗಳು" ಎಂಬ ಜಾನಪದ ಹಾಡುಗಳು ಪ್ರಚಲಿತವಿದ್ದವು. ಅವುಗಳಲ್ಲಿ ಸಂಸ್ಕೃತದ ಪ್ರಭಾವವಿರದೆ, ತಮಿಳಿನ ಒಂದು ಪ್ರಭೇದವಾಗಿಯೇ ಬೆಳೆದಿತ್ತು. ಚೇರ ರಾಜ್ಯದಲ್ಲಿ ಈ ಭಾಷೆಗೂ ಮನ್ನಣೆಯನ್ನು ನೀಡಲಾಗಿತ್ತು. ಚೇರ ರಾಜ್ಯವು ಕ್ರಿ.ಶ 1102 ರಲ್ಲಿ ಪತನಗೊಂಡು ಪಾಂಡ್ಯರಸರ ಪ್ರಭಾವ ಆರಂಭವಾಗಿ ಚೆಂಗನ್ನೂರಿನಿಂದ ಕನ್ಯಾಕುಮಾರಿಯವರೆಗೂ ಪಾಂಡ್ಯ ರಾಜ್ಯವಾಗಿತ್ತು. ಪಾಂಡ್ಯರಸರ ಕಾಲದಲ್ಲಿ ತಮಿಳುಭಾಷೆ ಮಾತ್ರ ಪ್ರಚಾರಗೊಂಡಿತ್ತು. ಪಾಂಡ್ಯರಸರು ಮಲೆಯಾಲ ಎಂಬ ಭಾಷೆಯನ್ನು ಗುರುತಿಸಿದ ವಿಚಾರಕ್ಕೆ ದಾಖಲೆಗಳಿಲ್ಲ. 19ನೆಯ ಶತಮಾನದಲ್ಲಿ ಪಾಶ್ಚಾತ್ಯದ ಪ್ರಭಾವ ಬೆಳೆಯತೊಡಗಿದಾಗ LINGUA MALABAR TAMUL ಎಂದೇ ಕರೆದಿದ್ದರು. ಅರ್ಥಾತ್ "ಮಲಬಾರ್ ತಮಿಳು" ಎಂದರ್ಥವಾಗುತ್ತದೆ. ಪೋರ್ಚುಗೀಸರು ಈ ಭಾಷೆಯ ಮೇಲೆ ಆಸಕ್ತಿ ವಹಿಸಿದ್ದರು. ತಲಚೇರಿ, ಕೊಲ್ಲಂ, ಅಂಬಾಲಕಟ್ಟಗಳಲ್ಲಿ ಮಿಷನರಿಗಳು ಈ ಭಾಷೆಗೆ ಪ್ರೋತ್ಸಾಹ ನೀಡಿದರು. 1820ರ ವರೆಗೂ ಕ್ರೈಸ್ತ ಮಿಷನರಿಗಳು ಮಲಬಾರ್ ತಮಿಳು ಭಾಷೆ ಮಾತ್ರ ಎಂದು ಬಳಸಿದ್ದರು. 1797 ರಲ್ಲಿ ಪ್ರಪ್ರಥಮ 'ಮಲೆಯಾಲ ನಿಘಂಟು' ಎನಿಸಿಕೊಂಡ ಪದಕೋಶವನ್ನು ಗ್ರಾಹಂ ಶಾ ಎಂಬುವರು ಮುದ್ರಿಸಿದರು. ಅದು ಮಲೆಯಾಯ್ಮೆ ಪ್ರಭೇದ ಒಳಗೊಂಡ ತಮಿಳು ಡಿಕ್ಷನರಿ ಆಗಿತ್ತು.

ನಂಬೂದರಿ ಬ್ರಾಹ್ಮಣರು ಸಂಸ್ಕೃತ ಪ್ರಭಾವಿತ ಗ್ರಂಥ ಭಾಷೆಯನ್ನು ತಮಿಳಿಗೆ ಅಳಡಿಸಿಕೊಂಡರು. ಶೇ 80 ರಷ್ಟು ಗ್ರಂಥ ಪದಗಳ ಸೇರ್ಪಡೆಯಿಂದ ಆ ಭಾಷಾ ರೂಪವೇ ಬದಲಾಗಿ ಹೋಯಿತು. ತುಳು ಭಾಷೆಗೂ ಬ್ರಾಹ್ಮಣ ಮೂಲದಿಂದಲೇ ಗ್ರಂಥ ಭಾಷೆಯ ಪ್ರಭಾವ ಉಂಟಾಯಿತೆಂದು ಭಾಷಾ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಪದಗಳು ಸಂಸ್ಕೃತೀಕರಣಗೊಂಡಿತಲ್ಲದೆ ಸಂಸ್ಕೃತ ವ್ಯಾಕರಣವನ್ನೇ ಅಳವಡಿಸಲಾಯಿತು. ಇದಕ್ಕೆ ಬ್ರಿಟಿಷ್ ಕಂಪೆನಿ ಆಡಳಿತ ಮತ್ತು ಕ್ರೈಸ್ತ ಮಿಶನರಿಗಳ ಪ್ರೋತ್ಸಾಹವೂ

ದೊರಕಿತು. ಮೂಲ ದ್ರಾವಿಡ ಭಾಷೆಗೆ ಗ್ರಂಥ ಭಾಷೆಯ ಆವರಣದಿಂದಾಗಿ ಮಲೆಯಾಲ ಭಾಷೆ ಜನ್ಮ ತಾಳಿತು.

ಮಲೆಯಾಲ ತಮಿಳಿನಿಂದ ಕವಲೊಡೆದ ಭಾಷೆ ಮತ್ತು ಕಾಲಕ್ರಮೇಣ ಬಹುಪಾಲು ಸಂಸ್ಕೃತ ಪದಗಳು ಆಯಾಮವಾಗಿ, ಮೂಲ ಕ್ರಿಯಾಪದದಾಂತ್ಯ ರೂಪವನ್ನೇ ಬದಲಾಯಿಸಿತು. ಜರ್ಮನ್ ಮಿಷನರಿಗೆ ಸೇರಿದ Hermann Gundert (1814–1897) ಕೇರಲೋಲ್ಪತ್ತಿ, ಪಯಂಚೊಲ್‌ಮಾಲ, ಮಲೆಯಾಲ ಭಾಷಾ ವ್ಯಾಕರಣ, ಮಲೆಯಾಲಂ ನಿಘಂಟು, ಮಲೆಯಾಲ ರಾಜ್ಯದ ಸಮಾಚಾರ ವಾರ್ತಾ ಪತ್ರಿಕೆಗಳ ಕೊಡುಗೆ ನೀಡಿದಾತ. ತಲಚೇರಿ ಕೇಂದ್ರವಾಗಿರಿಸಿಕೊಂಡು, ಜರ್ಮನಿ ಮಿಶನರಿ ಮಲೆಯಾಲ ಬೈಬಲ್ ಸಮೇತವಾಗಿ ಬಹಳಷ್ಟು ಕೊಡುಗೆಗಳನ್ನು ನೀಡಿತ್ತು. ಮಲೆಯಾಲದ ಕ್ಷಿಪ್ರ ಬೆಳವಣಿಗೆಗೆ ಈ ಮಿಶನರಿಗಳೇ ಕಾರಣವಾಗಿತ್ತು. ಇದಕ್ಕೆ ಬ್ರಿಟಿಷ್ ಅಧಿಕಾರಿಗಳ ಪ್ರೋತ್ಸಾಹವೂ ಇತ್ತು. ಕೇರಳದಿಂದಲೇ ಮಾಲಿಕ್ ಬಿನ್ ದೀನಾರ್ ನೇತೃತ್ವದಲ್ಲಿ ದೀನಾರ್ ಮಿಶನರಿ ಕೂಟವು ಇಸ್ಲಾಂ ಧರ್ಮ ಪ್ರಚಾರವನ್ನು ಆರಂಭಿಸಿತ್ತು. ಮಲೆಯಾಲ ಭಾಷೆ ಈ ಪ್ರಚಾರಕ್ಕೂ ಮಾಧ್ಯಮವಾಗಲು ಸಾಧ್ಯವಾಯಿತು. ಅಲ್ಲದೇ ಅರಬಿ, ಪಾರ್ಸಿ ಪದಗಳ ಸೇರ್ಪಡೆಯೂ ಆಯಿತು. ಮಲೆಯಾಲ ಭಾಷೆಯನ್ನು ಒಂದು ಶಾಸ್ತ್ರೀಯ ಭಾಷೆಯ ಮಟ್ಟಕ್ಕೇರಿಸಿದ್ದು ಕುಂಜತ್ತು ರಾಮಾನುಜಂ ಎಳುತ್ತಚ್ಚನ್ ಎಂಬವರು. ಇವರನ್ನು ಮಲೆಯಾಲ ಭಾಷೆಯ 'ಪಿತಾಮಹ' ನೆಂದು ಕರೆಯಲಾಗಿದೆ. ಹೀಗೆ ಮಲೆಯಾಲ ಭಾಷೆಯ ಉದ್ಭವ ಮತ್ತು ಬೆಳವಣಿಗೆಯನ್ನು ಪರಿಶೀಲಿಸಿದರೆ, ಎಲ್ಲಷ್ಟೂ ಗ್ರಂಥ ಭಾಷಾ ಪ್ರಭಾವವಿಲ್ಲದ ಬ್ಯಾರಿ ಭಾಷೆ, ಮಲೆಯಾಲದಿಂದ ಕವಲೊಡೆದುದಲ್ಲ. ನೇರವಾಗಿ ತಮಿಳಿನಿಂದಲೇ ಕವಲೊಡೆದು ಬಂದ ಭಾಷೆ ಎಂಬುದು ಸಾಬೀತಾಗುತ್ತದೆ. ಬ್ಯಾರಿ ಭಾಷೆಯಲ್ಲಿ ಗ್ರಂಥ ಭಾಷೆಯ ಕನಿಷ್ಟ ಪ್ರಭಾವವೂ ಇಲ್ಲ.

ಇನ್ನೊಂದು ಮಹತ್ವ ಪೂರ್ಣವಾದ ಬ್ಯಾರಿ ಭಾಷಾ ಅಸ್ತಿತ್ವದ ಪುರಾವೆ ಬ್ಯಾರಿಗಳಲ್ಲಿ ಬಳಕೆಯಲ್ಲಿದ್ದ 'ಬಟ್ಟೆಲುತ್ತು', ಅಂದರೆ ಬಟ್ಟೆ ಬರಹ. 1890 ರಲ್ಲಿ ದ.ಕ ಜಿಲ್ಲಾಧಿಕಾರಿಯಾಗಿದ್ದ Couchman ರಿಂದ ಪ್ರಥಮ ಭೂ ಸರ್ವೆ ನಡೆಯಿತು. ಈ ಮೊದಲ ಅಡಂಗಲ್ ದಾಖಲೆಗಳು ಕರಾವಳಿ ಜಿಲ್ಲಾ ಕಚೇರಿಗಳಲ್ಲಿ ಈಗಲೂ ಇವೆ. ತಮಿಳುನಾಡಿನ ಬ್ಯಾರಿಗಳ ಹೆಸರು ಮತ್ತು ವಾಸ ಸ್ಥಳಗಳು ಮಾತ್ರವಲ್ಲ ಆರ್ಥಿಕ ಸ್ಥಿತಿಗತಿಗಳು ಕೂಡಾ ಆ ದಾಖಲೆಯಲ್ಲಿವೆ. ಉತ್ತರ ಮಲಬಾರಿನಲ್ಲಿ, ಕಾಸರಗೋಡಿನಿಂದ ಬೈಂದೂರಿನವರೆಗೂ ತುಳುನಾಡಾಗಿ ಗುರುತಿಸಲ್ಪಟ್ಟ ಪ್ರದೇಶಗಳಲ್ಲಿ ಬ್ಯಾರಿಗಳಿದ್ದವೆಂಬುದನ್ನು ಇದರಿಂದ ತಿಳಿಯಬಹುದು. 1900 ರಿಂದೀಚೆಗೆ ನೋಂದಣಿ ದಾಖಲೆಗಳು ಆರಂಭವಾಗಿದ್ದು ಮಂಗಳೂರು, ಮಂಜೇಶ್ವರ, ಕಾಸರಗೋಡಿನ ನೋಂದಣಿ ಕಚೇರಿಗಳಿಂದ ಬ್ಯಾರಿ ಭೂದಾಖಲೆಗಳನ್ನು ಪರಿಶೀಲಿಸಿದರೆ, ಬಟ್ಟೆ ಬರಹದ ಸಹಿಯನ್ನು ಕಾಣಬಹುದು. 1937 ರಲ್ಲಿ ಪ್ರಚಲಿತವಿದ್ದ ಶಾರದಾ ಡೈರಿಯಲ್ಲಿ ಬರೆದಿಟ್ಟ ಬಟ್ಟೆ ಬರಹದ ದಾಖಲೆ, ಆ ಸಮಯದಲ್ಲಿ ಬ್ಯಾರಿಗಳಲ್ಲಿ ಬಳಕೆಯಲ್ಲಿದ್ದ ವ್ಯವಹಾರ ಬರಹ 'ಬಟ್ಟೆಲುತ್ತು' ಆಗಿತ್ತು. ಈ ಬಟ್ಟೆ ಬರಹ ಮೂಲ ತಮಿಳು ಲಿಪಿಯ ಒಂದು ಪ್ರಬೇಧವೇ ಆಗಿತ್ತು. ತುಳು ಲಿಪಿಯೆಂದು ಗುರುತಿಸಲಾದ ಲಿಪಿಯನ್ನೇ ಹೋಲುವ ಈ ಲಿಪಿಯು, ಮೂಲತಃ ತಿರುವಾಂಕೂರು ರಾಜ್ಯದ ಬುಡಕಟ್ಟು ಜನಾಂಗದಲ್ಲಿ ಬಳಕೆಯಲ್ಲಿದ್ದ 'ಮಾಲೆಯಾಮ್ಮೆ' ಭಾಷೆಯಲ್ಲಿ ಬಳಕೆಯಾಗಿತ್ತು. ಅವರ ಪಾಟುಗಳು, ಬರಹಗಳು ಇದೇ ಲಿಪಿಯಲ್ಲಿತ್ತು. ಪೋರ್ಚುಗೀಸರು ಈ

ಲಿಪಿಯನ್ನು ಗುರುತಿಸಿಕೊಂಡಿದ್ದರು. ಆದರೆ 1820 ರಲ್ಲಿ ಬ್ರಿಟಿಷ್ ಆಡಳಿತ ಈ ಲಿಪಿ ಬಳಕೆಗೆ ನಿಷೇಧ ಹೇರಿತ್ತು. ಬ್ರಿಟಿಷ್ ಆಡಳಿತದಲ್ಲಿ ಮಲೆಯಾಲ ಬೆಳವಣಿಗೆ ಆದಾಗ ಈ ಲಿಪಿಗೆ ಮನ್ನಣೆ ಇರಲಿಲ್ಲ. ಆದರೆ ತುಳು ಲಿಪಿಯಂತೆಯೇ ಬ್ಯಾರಿಗಳಲ್ಲಿ ಈ ಲಿಪಿಯ ಬಳಕೆ ಉಳಿದಿತ್ತು. ತಮಿಳಿನಿಂದ ಪ್ರತ್ಯೇಕವಾದ ಈ ಲಿಪಿ ಮತ್ತು ಭಾಷೆಯ ಅಸ್ತಿತ್ವವೇ ಬ್ಯಾರಿಗಳ ಪ್ರಾಚೀನತೆಯನ್ನು ಎತ್ತಿ ತೋರಿಸುತ್ತದೆ. ಮಲೆಯಾಳಿಗಳಿಗೆ ಒಲ್ಲದ ಈ ಲಿಪಿ, ಬ್ಯಾರಿಗಳಲ್ಲಿ ಮಾತ್ರ ಉಳಿದಿರುವುದು ಬ್ಯಾರಿ ಭಾಷಾ ಮೂಲವನ್ನು ತೋರಿಸುತ್ತದೆ. ಮಲಬಾರಿನ ಮಾಪಿಳ್ಳೆಗಳಲ್ಲಿ ಈ ಬರಹವಿರಲಿಲ್ಲ. ಈ ಬಟ್ಟೆಲುತ್ತು ಲಿಪಿಯೇ ಕೋಲೆಲುತ್ತು ಆಗಿ ಮಾರ್ಪಟ್ಟು ಗ್ರಂಥ ಭಾಷಾ ಪ್ರಭಾವದಿಂದ ಆಧುನಿಕ ಮಲೆಯಾಲ ಲಿಪಿಯಾಗಿ ಪರಿವರ್ತನೆಗೊಂಡಿತು.

**ಬ್ಯಾರಿ ಭಾಷೆಗೂ ದ್ರಾವಿಡ ಭಾಷೆಗೂ ಇರುವ ನಿಕಟ ಸಂಬಂಧಕ್ಕೆ ಇರುವ ಪುರಾವೆಗಳು ಈ ಕೆಳಗಿನಂತಿವೆ.**

- ಸಂಗಂ ತಮಿಳಿನಲ್ಲಿ ಮಹಾಪ್ರಾಣಾಕ್ಷರಗಳಿಲ್ಲ. ಬ್ಯಾರಿ ಭಾಷೆಯಲ್ಲೂ ಮಹಾ ಪ್ರಾಣಾಕ್ಷರಗಳಿಲ್ಲ ಎಂಬುದನ್ನು ಭಾಷಾ ತಜ್ಞರು ನಿರೂಪಿಸಿದ್ದಾರೆ.
- ತಮಿಳಿನಲ್ಲಿ ಗ್ರಂಥ ಭಾಷಾ ಪ್ರಭಾವವೇ ಇಲ್ಲ. ಬ್ಯಾರಿ ಭಾಷೆಯಲ್ಲೂ ಗ್ರಂಥ ಭಾಷಾ ಪ್ರಭಾವ ಇಲ್ಲ. ಬದಲಾಗಿ ಅರಬೀ ಭಾಷಾ ಪ್ರಭಾವವಿದೆ. ಧಾರಾಳ ಅರಬೀ ಪದಗಳು ಬಳಕೆಯಾಗಿವೆ.
- ತಮಿಳಿನಲ್ಲಿ ಹನ್ನೆರಡು ಸ್ವರಾಕ್ಷರಗಳು ಮತ್ತು ಹದಿನೆಂಟು ವ್ಯಂಜನಾಕ್ಷರಗಳು ಮಾತ್ರ ಇವೆ. ಬ್ಯಾರಿ ಭಾಷೆಯಲ್ಲಿ ಹನ್ನೆರಡು ಸ್ವರಾಕ್ಷರಗಳು ಮತ್ತು ಇಪ್ಪತ್ತೊಂದು ವ್ಯಂಜನಾಕ್ಷರಗಳಿವೆ. ಒಟ್ಟು ಮೂವತ್ತ ಮೂರು ಅಕ್ಷರಗಳಿಂದ ಬ್ಯಾರಿ ಪದೋಚ್ಚಾರಗಳು ಸ್ವತಂತ್ರವಾಗಿವೆ.
- ತಮಿಳಿನಲ್ಲಿ ಒಂದೇ **'ಶ'** ಮಾತ್ರ ಬಳಕೆಯಲ್ಲಿತ್ತು. ಕ್ರಮೇಣ 'ಸ'ವನ್ನು ಗ್ರಂಥ ಭಾಷೆಯಿಂದ ಎರವಲು ಪಡೆಯಲಾಯಿತು. ಬ್ಯಾರಿ ಭಾಷೆಯಲ್ಲಿ **'ಸ'** ಮಾತ್ರ ಬಳಕೆಯಲ್ಲಿದೆ. ಮಲೆಯಾಳದಲ್ಲಿ **'ಸ,ಶ,ಷ'** ಮೂರು ಅಕ್ಷರಗಳು ಬಳಕೆಯಲ್ಲಿವೆ.
- ಬ್ಯಾರಿ ಭಾಷೆಯಲ್ಲಿರುವ ಮಲೆಯಾಳದಿಂದ ಎರವಲು ಬಂದವುಗಳೆಂದು ಸೂಚಿಸಿದ ಪದಗಳೆಲ್ಲ ಮೂಲ ತಮಿಳು ಪದಗಳೇ. ಕ್ರಿಯಾಪದದ ಮೂಲ ಧಾತುಗಳು ಕೂಡಾ ತಮಿಳು ಮೂಲದವುಗಳೇ. ಉದಾ:– ಇಡ್, ಎಡ್, ಕೊಡ್ ಇತ್ಯಾದಿ. ಬ್ಯಾರಿ ಭಾಷೆಯು ದ್ರಾವಿಡ ಭಾಷೆಯೆಂದು ನಿರೂಪಿಸಬಹುದಾದ ಸಾವಿರಾರು ತಮಿಳು ಪದಗಳು ಬ್ಯಾರಿ ಭಾಷೆಯಲ್ಲಿವೆ. ಉದಾ: ವಾರಗಳ ಹೆಸರುಗಳು. ಞ್ಯಾಯರ್, ತಿಂಗಳ್, ಚೊವ್ವ, ಪೊದನ್, ವ್ಯಾಯ, ಬೆಲ್ಲಿ, ಸನಿ, ಹೀಗೆ ತಮಿಳು ಪದಗಳು ಬ್ಯಾರಿಗೆ ಬಂದಿವೆ. ಬೆಲ್ಲಿಯಾಸೆ, ಸನಿಯಾಸೆ ಇತ್ಯಾದಿ ಬ್ಯಾರೀಕರಣವಾಗಿ ಪ್ರಯೋಗವಾಗಿವೆ. ತನ್ನ್, ಮಿನ್ನ್, ಪೆನ್ನ್, ಕನ್ನ್, ತಿನ್ನ್, ಬ್ಯಾರಿ ಉಚ್ಚಾರಕ್ಕೆ ಹೊಂದಿಕೊಂಡು ಬಳಕೆಯಾಗಿವೆ. ಬಾ, ಪೋ, ಕಾತ್, ತೀ, ಮಲೆ, ಕಾಡ್, ನಾಡ್, ಪಾಲ್, ತಯಾರ್, ಮೋರ್, ಉಪ್ಪು, ಕಾರ, ಕೈಪೆ, ಕರಿ, ಚಿರಿ, ಪೊರಿ, ಮೀನ್, ಏಲ್, ಎಟ್, ಒಂಬೊವು, ಪತ್ತ್, ನೂರ್, ಆಯಿರ, ಲಕ್ಷ, ಕೋಡಿ, ನಲ್ಲದ್, ಕೆಟ್ಟದ್ ಇತ್ಯಾದಿ. ಬ್ಯಾರಿ ಭಾಷೆಯಲ್ಲಿ ಸಾವಿರಾರು ತಮಿಳು ಪದಗಳು ಯತ್ತೇಚ್ಛವಾಗಿ ಬಳಕೆಯಾಗಿವೆ ಎಂದರೂ ತಪ್ಪಾಗಲಾರದು. ಇಂತಹದೇ ಪದಗಳು ಮಲೆಯಾಲದಲ್ಲೂ ಇವೆಯಾದರೂ ಅವು ಗ್ರಂಥ ಭಾಷಾ ಉಚ್ಚಾರಗಳು ಮತ್ತು

ವ್ಯಾಕರಣಕ್ಕೆ ಒಗ್ಗಿಕೊಂಡಿವೆ. ಆದರೆ ಬ್ಯಾರಿ ಭಾಷೆಯಲ್ಲಿ ಇಂತಹ ಶಬ್ದಗಳು ತಮ್ಮ ಸ್ವತಂತ್ರ ಉಚ್ಚಾರವನ್ನು ಉಳಿಸಿಕೊಂಡಿವೆ. ಪದ ಪ್ರಯೋಗಗಳಲ್ಲಿಯೂ ವ್ಯತ್ಯಾಸಗಳನ್ನು ಕಾಣಬಹುದು. ಬ್ಯಾರಿ ಭಾಷಾ ಜನರಿರುವ ತುಳುನಾಡಿನ ನೆರೆಯಲ್ಲೇ ಮಲೆಯಾಳಿಗರ ಮಲಬಾರ್ ಇದ್ದು ಬ್ಯಾರಿ ಭಾಷಾ ಪ್ರಭಾವ ಮಲೆಯಾಲದ ಮೇಲಾಗಿರಬಹುದೆಂದರೆ ತಪ್ಪಾಗಲಾರದು.

ಬ್ಯಾರಿ ಭಾಷೆಯ ಮೂಲಸ್ಥಾನ ಮಂಗಳೂರು ಮತ್ತು ಸುತ್ತಮುತ್ತಲ ಸುಮಾರು ಮೂವತ್ತು ಕಿಲೋ ಮೀಟರುಗಳ ದೂರ ಮಾತ್ರ ಇದ್ದು ಈ ಭಾಷಾ ಪ್ರಭಾವ ಉತ್ತರಕ್ಕೆ ಬೈಂದೂರಿನವರೆಗೂ ದಕ್ಷಿಣಕ್ಕೆ ಹೊಸದುರ್ಗದವರೆಗೂ ವಿಸ್ತರಿಸಿತ್ತು. ದಕ್ಷಿಣದಲ್ಲಿ ಈ ಭಾಷೆಯ ಮೇಲೆ ಬಹಳಷ್ಟು ಮಲೆಯಾಳೀಕರಣದ ಪ್ರಭಾವ ಆಗಿದೆ. 'ಮಾಪ್ಲಾ'ಗಳೂ, ಬ್ಯಾರಿಗಳು ಮುಸ್ಲಿಮರೇ ಆಗಿದ್ದು, ಬ್ಯಾರಿಗಳಿಗೆ ಧಾರ್ಮಿಕ ಆಶ್ರಯ ಮಲೆಯಾಲದಿಂದಲೇ ಬಂದಿರುವುದರಿಂದ 'ಮಿಶ್ರಭಾಷೆ' ಹುಟ್ಟಿಕೊಂಡಿತು. ಮಾಪ್ಲಾ ಪಾಟುಗಳು, ಮಾಲೆ, ಕಿಸ್ಸ ಪಾಟುಗಳೆಲ್ಲ ಮಾಪ್ಲಾಗಳಿಂದ ಆಯಾಮವಾಗಿದೆ. ಅರಬೀ ಲಿಪಿಯಲ್ಲಿ ಬರೆಯಲಾಗುತ್ತಿದ್ದ 'ಅರಬೀ ಮಲಯಾಲವೆಂಬ' ಮಿಶ್ರಭಾಷೆ ಬ್ಯಾರಿಗಳಲ್ಲೂ ಪ್ರಚಾರದಲ್ಲಿತ್ತು. ಇದರಲ್ಲಿ ಬ್ಯಾರಿ, ತುಳು, ಅರಬಿ, ಮಲೆಯಾಲ, ಪದಗಳ ಮಿಶ್ರಣವಾಗಿ ಬಳಕೆಯಾಗಿತ್ತು. ಬ್ಯಾರಿ ಭಾಷಾ ಬೆಳವಣಿಗೆಗೆ ಇವು ಪೂರಕವಾಗಿರಲಿಲ್ಲ.

ಮಲಬಾರಿನ ಮಾಪ್ಲಾಗಳು, ತಮಿಳುನಾಡಿನ ಬ್ಯಾರಿಗಳಂತೆಯೇ ಅರಬೀ ಸಂಪರ್ಕದಿಂದ ಹುಟ್ಟಿಕೊಂಡ ಜನಾಂಗವಾಗಿತ್ತು. ಇವರು ವ್ಯಾಪಾರದಲ್ಲಿ ಚತುರರಾಗಿದ್ದು, ನಾಯಕತ್ವದಲ್ಲೂ ಪ್ರಾಮುಖ್ಯತೆಯನ್ನು ಪಡೆದುಕೊಂಡು ಮಹಾಪಿಳ್ಳ, ಮಾಪಿಳ್ಳ ಎಂದು ತಮಿಳರಿಂದ ಗುರುತಿಸಲ್ಪಟ್ಟಿದ್ದರು ಎಂಬ ಅಭಿಪ್ರಾಯವಿದೆ. ಜಾತಿಯಲ್ಲಿ ಮಾಪ್ಲಾಗಳು, ಬ್ಯಾರಿಗಳೂ, ಮುಸ್ಲಿಮರೇ. ಮುಸ್ಲಿಮರಲ್ಲಿ ಗಮನಾರ್ಹ ಉಪಜಾತಿಗಳಿಲ್ಲ. ಮಾಪ್ಲಾಗಳು ಒಂದು ಪ್ರಾದೇಶಿಕ ಮುಸ್ಲಿಂ ಜನಾಂಗ. ಬ್ಯಾರಿಗಳೂ ತುಳುನಾಡಿನ ಮುಸ್ಲಿಂ ಜನಾಂಗ ಮಲಬಾರಿನ 'ಮಾಪ್ಲಾ'ಗಳು ಮಾಪ್ಲಾ ಜಾತಿ ಎನ್ನುವಂತೆ ಮಾಡಿದ ಬ್ರಿಟಿಷ್ ಆಡಳಿತ ಮತ್ತು ಮಾಪ್ಲಾಗಳ ಧಾರ್ಮಿಕ ಪ್ರಭಾವದಿಂದಾಗಿ, ಬ್ಯಾರಿಗಳು ಮಾಪ್ಲಾ ಜಾತಿಯನ್ನು ಲೇಪಿಸಿಕೊಂಡರು. ಮೂಲತಃ ಬ್ಯಾರಿ ಜಾತಿ ಎಂದು ಗುರುತಿಸಿಕೊಳ್ಳಲು ವಿಫಲರಾದರು. ಬ್ಯಾರಿ ಭಾಷೆ, ಲಿಪಿ ಮತ್ತು ಬ್ಯಾರಿ ಜನಾಂಗವನ್ನು ಬ್ರಿಟಿಷರು ಕಡೆಗಣಿಸಿದ್ದರು. ಅವರು ಶ್ರೀಮಂತ ವರ್ಗವನ್ನು 'ಸಾಹೇಬ'ರೆಂದು ಗುರುತಿಸಿ 'ಸರ್' ಬಹುದೂರ್, ಸಾಹುಕಾರರೆಂಬ ಬಿರುದನ್ನು ಕೊಟ್ಟು ಅವರನ್ನು ತಮ್ಮ ಆಡಳಿತಾನುಕೂಲಕ್ಕೆ ಬಳಸಿಕೊಂಡರು. ಪರಿಣಾಮವಾಗಿ 'ಬ್ಯಾರಿ'ಗಳು ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುವಂತಾಗಿತ್ತು. ಬ್ಯಾರಿಗಳು ಮಾಪ್ಲಾಗಳಲ್ಲ ಎಂಬುದಕ್ಕೆ ಹಲವು ಸಾಕ್ಷ್ಯಾಧಾರಗಳೂ ಲಭ್ಯವಾಗಿವೆ.

ಬ್ಯಾರಿ ಭಾಷೆ ಸ್ವತಂತ್ರ ದ್ರಾವಿಡ ಭಾಷೆಯೇ. ಭಾಷಾ ತಜ್ಞರಾದ ಡಾ. ವಿವೇಕ ರೈ, ಡಾ. ಎ.ವಿ ನಾಡವ, ಡಾ. ಉಪಾಧ್ಯಾಯರು ಇದನ್ನೀಗ ಸಮರ್ಥಿಸಿದ್ದಾರೆ. ಕರ್ನಾಟಕ ಸರ್ಕಾರದ ಪ್ರೋತ್ಸಾಹದಿಂದ ಬ್ಯಾರಿ ಭಾಷೆ ಬೆಳೆಯಲಾರಂಭಿಸಿದೆ. ಸ್ವತಂತ್ರ, ಪರಿಪೂರ್ಣ ಭಾಷೆಯಾಗಿ ಈ ಭಾಷೆ ಬೆಳೆಯಲು ಬ್ಯಾರಿ ಬರಹಗಾರರು, ಸಮಸ್ತ ಬ್ಯಾರಿಗಳು ಒಟ್ಟಾಗಿ ಶ್ರಮಿಸಬೇಕಾಗಿದೆ.

**ಉಪಸಂಹಾರ**

ಬ್ಯಾರಿ ಭಾಷೆಯ ಎಲ್ಲಾ ಉಪಭಾಷೆಗಳ ಅಧ್ಯಯನ ನಡೆದ ಮೇಲೆ ಸಾಹಿತಿಗಳು, ವಿದ್ಯಾವಂತರು ಯಾವ ಆಡುನುಡಿಯನ್ನೂ ಔಪಚಾರಿಕ ಪರಿಸರದಲ್ಲಿ ಹೆಚ್ಚು ಬಳಸುತ್ತಾರೋ, ಯಾವ ಆಡುನುಡಿಯನ್ನು ಸಾಹಿತ್ಯ ನಿರ್ಮಾಣದಲ್ಲಿ ವರ್ತಮಾನ ಪತ್ರಿಕೆಗಳಲ್ಲಿ, ಸಭಾ ಕಾರ್ಯಕ್ರಮಗಳಲ್ಲಿ, ಭಾಷಣ ಪ್ರವಚನಗಳಲ್ಲಿ ಬಳಸುತ್ತಾರೋ ಅದು ಪ್ರಮಾಣ ಭಾಷೆಯಾಗಿ ಬೆಳೆಯಬಹುದು. ಅದು ರೂಪುಗೊಳ್ಳುವಾಗ, ಬೆಳೆಯುವಾಗ ಬೇರೆ ಬೇರೆ ಆಡು ಭಾಷೆಗಳಿಂದ ಸತ್ವವನ್ನು ಹೀರಿಕೊಳ್ಳಬಹುದು. ಮಲಾಮ್ ಭಾಷೆ ಮತ್ತು ಬ್ಯಾರಿ ಭಾಷೆಯ ವ್ಯತ್ಯಾಸ ಅಷ್ಟೆ. ಏನೇ ಆದರೂ ಬ್ಯಾರಿ ಭಾಷೆಯು ತನ್ನದೇ ಆದಂತಹ ಶೈಲಿಯನ್ನು, ಭಾಷಿಕ ಜನಾಂಗವೊಂದನ್ನು ಹೊಂದಿದ ಭಾಷೆ ಎನ್ನಬಹುದು.

**ಪರಾಮರ್ಶನ ಗ್ರಂಥಗಳು**


- ಇಚ್ಲಂಗೋಡು ಬಿ.ಎಂ. ಬ್ಯಾರಿ ಭಾಷೆ ದ್ರಾವಿಡ ಭಾಷೆಯೇ?. ಕನ್ನಡ ಸಂಘ, ವಿಜಯನಗರ, ಮೂಡುಬಿದ್ರೆ.
- ಇಚ್ಲಂಗೋಡು ಬಿ.ಎಂ (ಮಾರ್ಚ್ 21, 2016). ಬ್ಯಾರಿ ಭಾಷೆ ದ್ರಾವಿಡ ಭಾಷೆಯೇ?. ವಾರ್ತಾಭಾರತಿ ದಿನಪತ್ರಿಕೆ, ಮಂಗಳೂರು.
- ದೇವರಕೊಂಡಾ ರೆಡ್ಡಿ. (2009). ಲಿಪಿಯ ಹುಟ್ಟು ಮತ್ತು ಬೆಳವಣಿಗೆ. ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
- ದೇವಿ. ಜಿ.ಎನ್ (2017). ಕರ್ನಾಟಕದ ಭಾಷೆಗಳು. ಅಕ್ಷರ ಪ್ರಕಾಶನ, ಶಿವಮೊಗ್ಗ.
- ಬ್ಯಾರಿ ಭಾಷೆಗೆ ಸ್ವಂತ 'ಬ್ಯಾರಿ ಲಿಪಿ' ಬಿಡುಗಡೆ. (ಸೆಪ್ಟೆಂಬರ್ 11, 2020). ಮಂಗಳೂರಿಯನ್ ಆನ್ಲೈನ್ ಪತ್ರಿಕೆ. ಮಾಹಿತಿಯನ್ನು https://www.mangalorean.com/ಬ್ಯಾರಿ-ಭಾಷೆಗೆ-ಸ್ವಂತ-ಬ್ಯಾ/ ಅಂತರ್ಜಾಲ ಕೊಂಡಿಯಿಂದ ದಿನಾಂಕ 02/08/2021 ರಂದು ಪಡೆದುಕೊಳ್ಳಲಾಗಿದೆ.
- ಸುಶೀಲಾ ಪಿ. ಉಪಾಧ್ಯಾಯ. (2011). ಬ್ಯಾರಿ ಭಾಷೆ. ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ, ಮಂಗಳೂರು.